# 26ನೇ ದಿನ



| ಅವಧಿ | ಸಮಯ ಹಂಚಿಕೆ | ನಾಲ್ಕನೇ ತರಗತಿ | | | | | ಐದನೇ ತರಗತಿ | | | | |
|---|---|---|---|---|---|---|---|---|---|---|---|
| | | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| ಒಂದನೇ ಅವಧಿ | 10 ನಿಮಿಷ | ಕನ್ನಡ<br>ಅಜ್ಜಿಯ ಜಂಭ | * ಲೇಖನ ಚಿಹ್ನೆಗಳನ್ನುಪಯೋಗಿಸಿ ಓದುವ-ಬರೆಯುವ ಕೌಶಲ ಬೆಳೆಸುವುದು. | ಪಠ್ಯದಲ್ಲಿನ ಚಿತ್ರವನ್ನು ದೊಡ್ಡ ಅಳತೆಯ ಚಿತ್ರಪಟ<br>ಲೇಖನ ಚಿಹ್ನೆಗಳನ್ನೊಳಗೊಂಡ ಮಕ್ಕಳ ಮಿಂಚುಪಟ್ಟಿ | ಶಿಕ್ಷಕರು | **ಪೂ.ಸಿ.ಚ. :–**<br>ಮಕ್ಕಳಿಗೆ ನೀತಿಕಥೆಯನ್ನು ಹೇಳುವರು. (ಅಹಂಕಾರಕ್ಕೆ ಉದಾಸೀನವೆ ಮದ್ದು). | | | | | 5ನೇ ತರಗತಿ ಮಕ್ಕಳು 3ನೇ ತರಗತಿಯ ಮಕ್ಕಳೊಂದಿಗೆ ಇರುತ್ತಾರೆ. |
| | 40 ನಿಮಿಷ | | | | | **ಕಲಿಕಾಂಶ ಚಟುವಟಿಕೆ :–**<br>* ಲೇಖನ ಚಿಹ್ನೆಗಳ ಪರಿಚಯ ಮಾಡಿ ಕೊಡುವರು.<br>* ಲೇಖನ ಚಿಹ್ನೆಗಳಿರುವ ಪಠ್ಯವಸ್ತುವಿನ ವಾಕ್ಯಗಳ ಉಕ್ತಲೇಖನ ನೀಡುವರು.<br>* ಲೇಖನ ಚಿಹ್ನೆಗಳನ್ನು ಸ್ವಂತವಾಕ್ಯಗಳಲ್ಲಿ ಬಳಸಿ ಬರೆಯುವರು.<br>* ಪಾಠವನ್ನು ಲೇಖನ ಚಿಹ್ನೆಗಳಿಗನುಸಾರವಾಗಿ ಸ್ಪಷ್ಟವಾಗಿಯೂ ನಿಧಾನವಾಗಿಯೂ ಯುಕ್ತ ಸ್ವರಭಾವದೊಂದಿಗೆ ಓದಿಸುವರು. | | | | | |
| | 10 ನಿಮಿಷ | | | | | **ಅಭ್ಯಾಸ ಚಟುವಟಿಕೆ :–**<br>* ಈ ವಾಕ್ಯಗಳಿಗೆ ಸೂಕ್ತ ಲೇಖನ ಚಿಹ್ನೆ ಬಳಿಸ ಬರೆಯಿರಿ.<br>* ಮಕ್ಕಳೇ ಬನ್ನಿ<br>* ನೀನು ಯಾರು<br>* ಆಹಾ ಹೂವು ಎಷ್ಟು ಚೆನ್ನಾಗಿದೆ | | | | | |
| | 20 ನಿಮಿಷ | | | | | **ಮೌಲ್ಯಮಾಪನ ಚಟುವಟಿಕೆ :–**<br>ಕೆಲವು ಲೇಖನ ಚಿಹ್ನೆಗಳಿಗೆ ಸಂಬಂಧಿಸಿದ ವಾಕ್ಯಗಳನ್ನು ಕೊಟ್ಟು ಚಿಹ್ನೆಗಳನ್ನು ಬರೆಯಲು ಸೂಚಿಸುವರು. | | | | | |

# 26ನೇ ದಿನ



| ಅವಧಿ | ಸಮಯ ಹಂಚಿಕೆ | ನಾಲ್ಕನೇ ತರಗತಿ | | | | | ಐದನೇ ತರಗತಿ | | | | |
|---|---|---|---|---|---|---|---|---|---|---|---|
| | | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| ಎರಡನೇ ಅವಧಿ | 10 ನಿಮಿಷ | **ಜೀವನ ವಿಜ್ಞಾನ**<br>**ಊನ ನಿವಾರಕ ಚಟುವಟಿಕೆಗಳು** | * ವ್ಯಕ್ತಿಯ ದೈಹಿಕ, ಮಾನಸಿಕ ಸ್ಥೈರ್ಯಗಳು ಉತ್ತಮವಾಗಿ ಬೆಳೆದು ಅವನು ಕ್ರಿಯಾಶೀಲ ವ್ಯಕ್ತಿಯಾಗಿ ಸಮಾಜದಲ್ಲಿ ಬಾಳುವಂತಾಗುತ್ತಾನೆ. | ಸರಿ ಮತ್ತು ತಪ್ಪು ಭಂಗಿಯ ನಡಿಗೆ, ಕುಳಿತುಕೊಳ್ಳುವ ಇತರೆ ಚಿತ್ರಪಟ | ಶಿಕ್ಷಕರು | **ಪೂ.ಸಿ.ಚ. :–**<br>"ಬೆಟ್ಟಕ್ಕೆ ಬೆಂಕಿ ಬಿತ್ತು ಓಡಿ ಓಡಿ ಓಡಿ<br>ಆಟೋ ರಿಕ್ಷಾ ಚಕ್ರ.......... ..............."<br>ಹೀಗೆ ಮಕ್ಕಳನ್ನು ವೃತ್ತಾಕಾರವಾಗಿ ನಿಲ್ಲಿಸಿ ಬಲಕ್ಕೆ ತಿರುಗುವಂತೆ ಹೇಳಬೇಕು. ಮಗುವು ವೃತ್ತಾಕಾರವಾಗಿ ಓಡುತ್ತಿರುವಾಗ ಶಿಕ್ಷಕರು ಆಟೋ ಚಕ್ರ ಎನ್ನುತ್ತಿದ್ದಂತೆ ಮೂರುಜನ ಮಕ್ಕಳು ಗುಂಪಾಗಿ ನಿಲ್ಲಬೇಕು ಹೀಗೆ ಚಟುವಟಿಕೆ ಅಳವಡಿಸಿಕೊಳ್ಳಬೇಕು. | **5ನೇ ತರಗತಿ ಮಕ್ಕಳು 3ನೇ ತರಗತಿಯ ಮಕ್ಕಳ ಜೊತೆ ಇರುತ್ತಾರೆ.** | | | | |
| | 40 ನಿಮಿಷ | | | | | ಶಿಕ್ಷಕರು ಚಿತ್ರಪಟಗಳನ್ನು ಪ್ರದರ್ಶಿಸುತ್ತಾ ಮಕ್ಕಳ ದೈಹಿಕ ಊನತೆ ಇರುವವರನ್ನು ಸರಿಯಾದ ಭಂಗಿಗಳನ್ನು ರೂಢಿಮಾಡಿಸುವ ಸರಳ ವಿಧಾನಗಳನ್ನು ವಿದ್ಯಾರ್ಥಿಗಳಿಗೆ ತಿಳಿಸುವರು ಹಾಗೂ ಅವುಗಳನ್ನು ಸೂಕ್ತವಾಗಿ ಅಭ್ಯಾಸ ಮಾಡಿಸುವರು. ಇದರಿಂದ ಸಮರ್ಪಕ ಶಾರೀರಿಕ ಬೆಳವಣಿಗೆಯಾಗಿ ಮುಂದೆ ಉಂಟಾಗ ಬಹುದಾದ ಶಾರೀರಿಕ ಹಾಗೂ ಇತರ ವ್ಯಕ್ತಿತ್ವ ದೋಷಗಳನ್ನು ನಿವಾರಿಸಬಹುದು. ಎಳೆತನದಿಂದಲೇ ಸರಿಯಾದ ಭಂಗಿಗಳನ್ನು ಅಭ್ಯಾಸ ಮಾಡುವುದು ಸೂಕ್ತ ಎಂದು ಮಕ್ಕಳಿಗೆ ಮನವರಿಕೆ ಮಾಡಿಕೊಡುವರು. | | | | | |
| | 30 ನಿಮಿಷ | | | | | ಈ ಕೆಳಗಿನ ಭಂಗಿಗಳ ಅಭ್ಯಾಸ ಮಾಡಿಸುವರು.<br>* ಕುಳಿತುಕೊಳ್ಳುವಾಗ, ನಿಲ್ಲುವಾಗ, ಮಲಗುವಾಗ, ನಡೆಯುವಾಗ | | | | | |

# 26ನೇ ದಿನ

| ಅವಧಿ (1) | ಸಮಯ ಹಂಚಿಕೆ (2) | ನಾಲ್ಕನೇ ತರಗತಿ — ವಿಷಯ ಮತ್ತು ಪಾಠದ ಹೆಸರು (3) | ಸಾಮರ್ಥ್ಯದ ವಿವರ (4) | ಬಳಸ ಬಹುದಾದ ಕಲಿಕಾ ಸಾಮಗ್ರಿ (5) | ನಿರ್ವಹಣೆ (6) | ಕಲಿಕಾ ಪ್ರಕ್ರಿಯೆ (7) |
|---|---|---|---|---|---|---|
| ಮೂರನೇ ಅವಧಿ | 10 ನಿಮಿಷ | **ಪರಿಸರ ಅಧ್ಯಯನ**<br>**ನಮ್ಮ ದೇಹ (ಮುಂ. ಪಾಠ)** | * ದೇಹದಲ್ಲಿ ನಡೆಯುವ ಮುಖ್ಯ ಕ್ರಿಯೆಗಳು ಮತ್ತು ಅವುಗಳಿಗೆ ಸಂಬಂಧಪಟ್ಟ ಮುಖ್ಯ ಅಂಗಗಳ ಪರಿಚಯ | ವಿಸರ್ಜನಾಂಗವ್ಯೂಹದ ಚಿತ್ರ | ಶಿಕ್ಷಕರು | **ಪೂ.ಸಿ.ಚ :–**<br>"ದೇಹದ ಒಳಗೆ ವಿಧ ವಿಧ ಅಂಗ ತಮ್ಮ ಪಾಡಿಗೆ ದುಡಿಯುವವು ಇದರಿಂದಾಗಿಯೇ ಸುಸೂತ್ರವಾಗಿ ದೇಹದ ಕ್ರಿಯೆಗಳು ನಡೆಯುವವು" ಈ ಹಾಡನ್ನು ಹಾಡಿಸುವರು. (ಚುಕ್ಕಿ ಚಿನ್ನ ಪುಟಸಂಖ್ಯೆ 89ನ್ನು ನೋಡಿ). |
| | 30 ನಿಮಿಷ | | | | | **ಕಲಿಕಾಂಶ ಚಟುವಟಿಕೆ :–**<br>ವಿಸರ್ಜನಾಂಗವ್ಯೂಹದ ಚಿತ್ರಪಟ ಪ್ರದರ್ಶಿಸುತ್ತಾ ವಿಸರ್ಜನ ಕ್ರಿಯೆ, ಬಗ್ಗೆ ತಿಳಿಸುವರು. ಚರ್ಮವು ಒಂದು ವಿಸರ್ಜನಾಂಗ ಇದು ದೇಹದಲ್ಲಿ ಉತ್ಪತ್ತಿಯಾಗುವ ಎಲ್ಲಾ ಕಲ್ಮಶಗಳನ್ನು ದೇಹದಿಂದ ಹೊರಹಾಕುವ ಕ್ರಿಯೆಯೇ ವಿಸರ್ಜನಕ್ರಿಯೆ ಇದರ ಬಗ್ಗೆ ವಿವರಣೆ ನೀಡುವರು. |
| | 40 ನಿಮಿಷ | | | ಬಣ್ಣದ ಪೆನ್ಸಿಲ್‌ಗಳು | ಹಿರೇಮಣಿ | **ಸೂಚನೆ :**<br>ಮೂತ್ರಜನಕಾಂಗದ ಚಿತ್ರವನ್ನು ಬರೆದು ಬಣ್ಣ ಹಾಕಲು ಶಿಕ್ಷಕರು ಸೂಚಿಸುವರು..<br>ಹಿರೇಮಣಿ ನಿರ್ವಹಿಸುವರು. |

| ಅವಧಿ (1) | ಸಮಯ ಹಂಚಿಕೆ (2) | ಐದನೇ ತರಗತಿ — ವಿಷಯ ಮತ್ತು ಪಾಠದ ಹೆಸರು (8) | ಸಾಮರ್ಥ್ಯದ ವಿವರ (9) | ಬಳಸ ಬಹುದಾದ ಕಲಿಕಾ ಸಾಮಗ್ರಿ (10) | ನಿರ್ವಹಣೆ (11) | ಕಲಿಕಾ ಪ್ರಕ್ರಿಯೆ (12) |
|---|---|---|---|---|---|---|
| ಮೂರನೇ ಅವಧಿ | 10 ನಿಮಿಷ<br>30 ನಿಮಿಷ | Can you tell me what this is ? | Use of structures | Things found in and around | LEADER | Teacher divides the whole class into two group and instruct them to do the activity given below.<br>**Learning Activity :-**<br>Within the help of leader, one group of children ask what's this / that ?<br>The other group answer<br>This is a ball<br>That is a ball etc. |
| | 40 ನಿಮಿಷ | **ಸಮಾಜ ವಿಜ್ಞಾನ**<br>**ಸಿಂಧೂ ನಾಗರೀಕತೆ (ಮುಂ. ಪಾಠ)** | * ಭಾರತದ ಪ್ರಾಚೀನ ಕಾಲದಲ್ಲಿಯೇ ಉಚ್ಛಮಟ್ಟದ ನಾಗರೀಕತೆ ಇತ್ತು ಎಂಬುದನ್ನು ತಿಳಿದು ಅಭಿಮಾನ ಪಡುವುದು. | ಅಭರಣಗಳ ಚಿತ್ರಪಟ, ಅಲಂಕಾರಿಕ ಸಾಧನ. | ಶಿಕ್ಷಕರು | **ಪೂರ್ವಸಿದ್ಧತಾ ಚಟುವಟಿಕೆ :–**<br>ಸಿಂಧೂ ನಾಗರಿಕತೆಯ ಬಗ್ಗೆ ಮಕ್ಕಳೊಡನೆ ಚರ್ಚೆ.<br>**ಕಲಿಕಾಂಶ ಚಟುವಟಿಕೆ :–**<br>* ಸಿಂಧೂ ನಾಗರೀಕತೆಯಲ್ಲಿ ಜನರು ಬಳಸುತ್ತಿದ್ದ ಕಂಚಿನ ಸಾಮಗ್ರಿ ಮತ್ತು ಆಯುಧಗಳ ಬಗ್ಗೆ, ವರ್ಣರಂಜಿತ ಮಡಕೆಗಳ ತಯಾರಿಕೆ, ಹತ್ತಿ ಮತ್ತು ಉಣ್ಣೆ ಬಟ್ಟೆಗಳ ಬಳಕೆ ಪಶುಸಾಕಣೆ ಮತ್ತು ಆಹಾರದ ಬಗ್ಗೆ ವಿವರಣೆಯನ್ನು ನೀಡುವರು.<br>**ಅಭ್ಯಾಸ ಚಟುವಟಿಕೆ :–**<br>ಆರ್ಥಿಕ ಪರಿಸ್ಥಿತಿ, ಸಮಾಜ ಜೀವನ, ಪಶು ಸಾಕಣೆ ಮತ್ತು ಆಹಾರದ ಬಗ್ಗೆ ಕುತೂಹಲಕರ ಅಂಶಗಳನ್ನು ಹಿಂದಿನ ನಾಗರೀಕತೆಗೆ ಹೋಲಿಸಿ ವಿಮರ್ಶಿಸುವರು.. |

# 26ನೇ ದಿನ



| ಅವಧಿ | ಸಮಯ ಹಂಚಿಕೆ | ನಾಲ್ಕನೇ ತರಗತಿ: ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ಐದನೇ ತರಗತಿ: ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
|---|---|---|---|---|---|---|---|---|---|---|---|
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| ನಾಲ್ಕನೇ ಅವಧಿ | 05 ನಿಮಿಷ | **ಗಣಿತ**<br>**ತೂಕದ ವ್ಯತ್ಯಾಸ ಕಂಡು ಹಿಡಿಯುವುದು.** | ಎರಡು ತೂಕಗಳ ನಡುವಿನ ವ್ಯತ್ಯಾಸವನ್ನು ಕಂಡುಹಿಡಿಯುವ ಸಾಮರ್ಥ್ಯವನ್ನು ಗಳಿಸುವರು. | 1 ಕಿ.ಗ್ರಾಂ, 2 ಕಿ.ಗ್ರಾಂ, 500 ಗ್ರಾಂ, 200 ಗ್ರಾಂ, 100 ಗ್ರಾಂ ತೂಕದ ಬಟ್ಟುಗಳು , ತಕ್ಕಡಿ | ಶಿಕ್ಷಕರು | **ಪೂ.ಸಿ.ಚ :–** "ಯಾವುದು ಹಗುರ ಯಾವುದು ಭಾರ ? ಚಿಕ್ಕದು ಹಗುರ ದೊಡ್ಡದು ಭಾರ" ಎಂಬ ಹಾಡು ಹೇಳಿಕೊಡುವರು. (ಚುಕ್ಕಿ ಚಿನ್ನ ಪುಸ್ತಕದ 75ನೇ ಪುಟನೋಡಿ). | **ವಿಜ್ಞಾನ**<br>**ಸಜೀವಿಗಳ ಗುಣಲಕ್ಷಣಗಳು** | ಸಜೀವಿಗಳು ನಿರ್ಜವಿಗಳಿಗಿರುವ ಗುಣಲಕ್ಷಣಗಳಿಗಿಂತ ವಿಶಿಷ್ಟವಾದ ಗುಣಲಕ್ಷಣಗನ್ನು ಹೊಂದಿವೆ ಎಂದು ತಿಳಿಯುವರು. | ಪ್ರಾಣಿ, ಸಸ್ಯ, ಚಿತ್ರಪಟ ಪಠ್ಯಪುಸ್ತಕ | ಹಿರೇಮಣಿ | **ಪೂ.ಸಿ.ಚ. :–**<br>ಹಿಂದಿನ ಅವಧಿಯಲ್ಲಿ ಕಲಿಕ ವಿಷಯದ ಬಗ್ಗೆ ಪುನರಾವರ್ತನೆ ಮಾಡುವರ.<br>ಶಿಕ್ಷಕರು ಮಕ್ಕಳಿಗೆ ಸೂಕ್ತ ಸೂಚನೆ ನೀಡುವರು.<br>ಹಿರೇಮಣಿ ನಿರ್ವಹಿಸುವರು.<br>ಜೈವಿಕ ಮತ್ತು ಅಜೈವಿಕ ಅಂಶಗಳನ್ನು ಪಟ್ಟಿ ಮಾಡಿರಿ. (ಸಜೀವಿಗಳು ಮತ್ತು ನಿರ್ಜೀವಿಗಳು) |
| | 20 ನಿಮಿಷ | | | | | **ಕಲಿಕಾಂಶ ಚಟುವಟಿಕೆ :–** ತಕ್ಕಡಿಯಲ್ಲಿ 3000 ಗ್ರಾಂ. (3 ಕೆ.ಜಿ) ಅಕ್ಕಿಯನ್ನು ತೆಗೆದುಕೊಂಡು ಅದರಲ್ಲಿ 200 ಗ್ರಾಂ ತೂಕದ ಅಕ್ಕಿಯನ್ನು ಹೊರ ತೆಗೆಯುವುದು. ಆಗ ಉಳಿದ ದ್ರವ್ಯರಾಶಿಯ ಬೆಲೆ ತಿಳಿಯುವಂತೆ ಮಕ್ಕಳಿಗೆ ಸೂಚಿಸುವರು. ಅನಂತರ ಅಭ್ಯಾಸದಲ್ಲಿನ ಲೆಕ್ಕಗಳನ್ನು ಅಭ್ಯಾಸ ಮಾಡಿಸುವರು. | | | | | |
| | 10 ನಿಮಿಷ | | | | | | | | | ಶಿಕ್ಷಕರು | ಜೈವಿಕ ಮತ್ತು ಅಜೈವಿಕ ಅಂಶಗಳನ್ನು ಪಟ್ಟಿ ಮಾಡಿದ ಬಗ್ಗೆ ಚರ್ಚಿಸುವರು.<br>**ಕಲಿಕಾಂಶ ಚಟುವಟಿಕೆ :–**<br>ಸಜೀವಿಗಳ ಗುಣಲಕ್ಷಣಗಳಾದ ಬೆಳವಣಿಗೆ ಬಗ್ಗೆ ವಿವರಿಸುವರು. |
| | 05 ನಿಮಿಷ | **ಸಾ. ಉ. ಉ. ಕಾ.** | * ಕಡಿಮೆ ವೆಚ್ಚದ ವಸ್ತುಗಳಿಂದ ಅಲಂಕಾರಿಕ ವಸ್ತುಗಳ ತಯಾರಿಕೆ ಕೌಶಲ ಬೆಳೆಸುವುದು. | ಬೀಸಣಿಕೆ, ಜರಿಬಟ್ಟೆ, ದಾರ, ಸೂಜಿ | ಹಿರೇಮಣಿ | **ಸೂಚನೆ :** ಶಿಕ್ಷಕರು ಹಿಂದಿನ ಅವಧಿಯಲ್ಲಿ ಮಾಡಿರುವ ಬೀಸಣಿಗೆಗೆ ಬಟ್ಟೆಯಿಂದ ಬಾರ್ಡರ್ ಹಾಕಿಸುವಂತೆ ಮಾರ್ಗದರ್ಶಿಸುವರು.<br>ಹಿರೇಮಣಿ ನಿರ್ವಹಿಸುತ್ತಾರೆ.<br> | | | | | |
| | 10 ನಿಮಿಷ | | | | | | | | | | |
| | 30 ನಿಮಿಷ | | | | | | | | | | **ಅಭ್ಯಾಸ ಚಟುವಟಿಕೆ :–**<br>ಒಂದು ಪ್ಲಾಸ್ಟಿಕ್ ಚೀಲದಲ್ಲಿ ಮಣ್ಣನ್ನು ತುಂಬಿ ರಾಗಿಯನ್ನು ಹಾಕಿ ನೀರು ಹಾಕಿ ಸೂರ್ಯನ ಬೆಳಕು ಬೀಳುವ ಸ್ಥಳದಲ್ಲಿಯ ಬದಲಾವಣೆಗಳನ್ನು ಗಮನಿಸುವರು.<br>**ಮೌಲ್ಯಮಾಪನ ಚಟುವಟಿಕೆ :–**<br>1) ಬೆಳವಣಿಗೆ ಎಂದರೇನು ?<br>2) ಬೀಜ ಬಿತ್ತನೆ ಮಾಡಿರುವ ಕುಂಡದಲ್ಲಿ ಆಗುವ ಬದಲಾವಣೆ ಪಟ್ಟಿ ಮಾಡಿ. |

# 27ನೇ ದಿನ



| ಅವಧಿ | ಸಮಯ ಹಂಚಿಕೆ | ನಾಲ್ಕನೇ ತರಗತಿ: ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ಐದನೇ ತರಗತಿ: ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
|---|---|---|---|---|---|---|---|---|---|---|---|
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| ಒಂದನೇ ಅವಧಿ | 15 ನಿಮಿಷ | ಕನ್ನಡ<br>ಪಾಠ – 4 ಅಜ್ಜಿಯ ಜಂಬ (ಮುಂದುವರಿಕೆ) | * ಲೇಖನ ಚಿಹ್ನೆಗಳನ್ನುಪಯೋಗಿಸಿ ಓದುವ – ಬರೆಯುವ ಕೌಶಲ್ಯ ಬೆಳೆಸುವುದು | ಹೊಸ ಪದಗಳ ಅರ್ಥವಿರುವ ಮಿಂಚುಪಟ್ಟಿ, ವಿರುದ್ಧ ಪದಗಳ ಮಿಂಚುಪಟ್ಟಿ | ಶಿಕ್ಷಕರು | **ಪೂ.ಸಿ.ಚ. :–**<br>ಶಿಕ್ಷಕರು ವೃತ್ತಾಕಾರದಲ್ಲಿ ವಿದ್ಯಾರ್ಥಿಗಳನ್ನು ನಿಲ್ಲಿಸಿ "ಎಲ್ಲರಿಗೊಂದೆ ಭೂಮಿ ಎಲ್ಲರಿಗೂ ಭಗವಂತನೆ ತಂದೆ ವಿಧ ವಿಧವಾದರೂ ಮೈಯ್ ಬಣ್ಣ ಎಲ್ಲರ ನಗೆಯು ಒಂದೇ ಅಣ್ಣ" ಅಭಿನಯದೊಂದಿಗೆ ಹಾಡು ಹಾಡಿಸುವರು. | 3ನೇ ವರ್ಗದವರೊಂದಿಗೆ ಹೊಂದಾಣಿಕೆಯಾಗಿರುತ್ತಾರೆ. | | | | |
| | 45 ನಿಮಿಷ | | | | | **ಕಲಿಕಾಂಶ ಚಟುವಟಿಕೆ :–**<br>* ಶಿಕ್ಷಕರು ಮಾದರಿವಾಚನ ಮಾಡುವರು.<br>"ಅಜ್ಜಿ ಕಾಡಿನಲ್ಲಿಯೇ ಉಳಿದಿದ್ದಳು............ ........... ................... ................. ................. ................. ..................... ಎಲ್ಲರಂತೆ ಬಾಳತೊಡಗಿದಳು".<br>* ಹೊಸಪದಗಳ ಅರ್ಥ ತಿಳಿಸುವರು.<br>ವರ್ತನೆ – ನಡವಳಿಕೆ, ಜಂಬ–ಸೊಕ್ಕು, ಅಹಂಕಾರ<br>* ಮೌನವಾಚನ<br>* ಚಿಕ್ಕ ಚಿಕ್ಕ ಪ್ರಶ್ನೆಗಳಿಗೆ ಉತ್ತರ ಪಡೆಯುವರು.<br>ಅಜ್ಜಿ ಇರುವ ಕಾಡಿಗೆ ಯಾರು ಬಂದರು ?<br>ಅಜ್ಜಿಯು ಆತನಿಗೆ ಏನೆಂದು ಕೇಳಿದಳು ?<br>ಅಜ್ಜಿಯ ಜಂಬ ಕರಗಿದುದು ಹೇಗೆ ?<br>* ವಿರುದ್ಧ ಪದಗಳ ಅರ್ಥ ತಿಳಿಸುವರು.<br>ಸೂರ್ಯೋದಯ X ಸೂರ್ಯಾಸ್ತ<br>ಗಟ್ಟಿ X ______ ನಗು X ______<br>ಹೊತ್ತಿಸು X ______ ಮೇಲೆ X ______<br>ಪಠ್ಯ ಭಾಗದ ಅರ್ಥ ವಿವರಣೆ ನೀಡುವರು. | | | | | |
| | 20 ನಿಮಿಷ | | | | | **ಅಭ್ಯಾಸ ಚಟುವಟಿಕೆ :–**<br>* "ಶೂರನಾಗಿರಬೇಕು; ಆದರೆ ಜಂಬ ಕೊಚ್ಚಿಕೊಳ್ಳ ಬಾರದು" – ಮಹಾಭಾರತ ಈ ವಾಕ್ಯವನ್ನು ಸುಂದರ ವಾಗಿ ಬರೆದು ಉದಾ:ಗಳೊಂದಿಗೆ ವಿವರಣೆ ಬರೆಯಲು ಹೇಳುವರು | | | | | |
| | | | | | | **ಮೌಲ್ಯಮಾಪನ ಚಟುವಟಿಕೆ :–**<br>ಈ ಪಾಠದಲ್ಲಿ ಬಂದ 10 ಪದಗಳನ್ನಾಯ್ದು ವಿರುದ್ಧಪದ ಬರೆಯಲು ಹೇಳುವರು.<br>"ಅತಿ ಜಂಬ ಮತಿಗೇಡು" ಈ ರೀತಿಯ ನುಡಿಗಟ್ಟುಗಳನ್ನು ಬರೆಯಲು ಹೇಳುವರು. | | | | | |

| ಅವಧಿ | ಸಮಯ ಹಂಚಿಕೆ | ನಾಲ್ಕನೇ ತರಗತಿ: ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ಐದನೇ ತರಗತಿ: ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
|---|---|---|---|---|---|---|---|---|---|---|---|
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| ಎರಡನೇ ಅವಧಿ | 15 ನಿಮಿಷ | **ಜೀವನ ವಿಜ್ಞಾನ ಸರಳ ವ್ಯಾಯಾಮಗಳು** | * ವಜ್ರಾಸನದಲ್ಲಿ ಕೂಡುವ ಅಭ್ಯಾಸ ಮಾಡುವರು. | ಆಸನಾಭ್ಯಾಸದ ಮುನ್ನ ಮಾಡುವ ಸರಳ ವ್ಯಾಯಾಮಗಳನ್ನು ಅಭ್ಯಾಸ ಮಾಡುವುದು. | ಶಿಕ್ಷಕರು | **ಪೂ.ಸಿ.ಚ.** :– * ವೃತ್ತಾಕಾರದಲ್ಲಿ ನಿಲ್ಲಿಸಿ ಶಿಕ್ಷಕರು ವಜ್ರಾಸನದಲ್ಲಿ ಕೂಡಲು ಆದೇಶಿಸುವರು. ಯೋಗ ಪ್ರಾರ್ಥನೆ– 'ಯೋಗೇನ ಚಿತ್ತಸ್ಯ ಹಾಡಿಸುವರು'. | **3ನೇ ವರ್ಗದವರೊಂದಿಗೆ ಹೊಂದಾಣಿಕೆಯಾಗಿರುತ್ತಾರೆ.** | | | | |
| | | | | | | * ಆಸನಾಭ್ಯಾಸದ ಮುನ್ನ ಮಾಡುವ ಸರಳ ವ್ಯಾಯಾಮಗಳನ್ನು ಮಾಡಿಸುವರು.<br>* ನಿಂತು ಮಾಡುವ ಚಟುವಟಿಕೆಗಳು.<br>* ಕಣ್ಣುಗಳಿಗೆ ವ್ಯಾಯಾಮಗಳು (ಜೀವನ ವಿಜ್ಞಾನ ಪುಸ್ತಕದ ಪುಟ 35 ನೋಡಿ)<br>ಮಕ್ಕಳು ಮೇಲ್ಕಂಡ ಚಟುವಟಿಕೆಗಳನ್ನು ಶಿಕ್ಷಕರ ಸೂಚನೆಯಂತೆ ಮಾಡುವರು. | | | | | |
| | 10 ನಿಮಿಷ | **ಸಾ. ಉ. ಉ. ಕಾ.** | * ಜೇಡಿ ಮಣ್ಣಿನಿಂದ ರೇಖಾಕೃತಿ ತಯಾರಿಸುವ ಕೌಶಲ ಬೆಳೆಸುವುದು. | ಮಣ್ಣು, ನೀರು, ಬಣ್ಣ. | ಶಿಕ್ಷಕರು | ಶಿಕ್ಷಕರು ವಿದ್ಯಾರ್ಥಿಗಳನ್ನು ವೃತ್ತದಲ್ಲಿ ನಿಲ್ಲಿಸಿ ಮನರಂಜನೆ ಆಟ ಆಡಿಸುವರು. | | | | | |
| | 20 ನಿಮಿಷ | | | | | **ಜೇಡಿಮಣ್ಣಿನಿಂದ ಆಕೃತಿಗಳನ್ನು ತಯಾರಿಸುವುದು.**<br>* ಶಿಕ್ಷಕರು ಮಣ್ಣಿನಿಂದ ಮಾದರಿಯಾಗಿ ರೇಖಾಕೃತಿ ತಯಾರಿಸಿ ಪ್ರದರ್ಶಿಸುವರು.<br>* ಮಕ್ಕಳು ಮಣ್ಣನ್ನು ಹದಗೊಳಿಸಿಕೊಂಡು ಗುಂಪಿನಲ್ಲಿ ಕುಳಿತು ವಿವಿಧ ರೇಖಾಕೃತಿಗಳನ್ನು ತಯಾರಿಸುವರು.<br>**ಉದಾ :** ಆಯತ, ಚೌಕ, ಗೋಳ ಇತ್ಯಾದಿ ವಿವಿಧ ಬಣ್ಣಗಳು ಹಚ್ಚುವರು. | | | | | |

| | | ನಾಲ್ಕನೇ ತರಗತಿ | | | | | ಐದನೇ ತರಗತಿ | | | | |
|---|---|---|---|---|---|---|---|---|---|---|---|
| ಅವಧಿ | ಸಮಯ ಹಂಚಿಕೆ | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| ಮೂರನೇ ಅವಧಿ | 10 ನಿಮಿಷ | ಗಣಿತ<br>ನಿತ್ಯ ಜೀವನದಲ್ಲಿ ತೂಕದ ಅಳತೆ | * ಗ್ರಾಂಗಳು 100ರ ಅಥವಾ 250ರ ಗುಣಕಗಳಾಗಿರುವಂತೆ, ಕಿಲೋಗ್ರಾಂ ಗ್ರಾಂಗಳನ್ನೊಳಗೊಂಡ, ಪರಿವರ್ತನೆ ಇಲ್ಲದ ಸರಳ ಒಂದು ಹಂತದ, ನಿತ್ಯ ಜೀವನದ ಸಮಸ್ಯೆಗಳನ್ನು ಮಾನಸಿಕವಾಗಿ ಬಿಡಿಸುತ್ತಾರೆ. * ತೂಕಕ್ಕೆ ಸಂಬಂಧಿಸಿದ ಸರಳ ನಿತ್ಯಜೀವನದ 1 ಹಂತದ ಸಮಸ್ಯೆ ಬಿಡಿಸುತ್ತಾನೆ. | ತೂಕದ ಬಟ್ಟುಗಳು, ಚಾರ್ಟ್ಸ್, ಮಿಂಚು ಪಟ್ಟಿಗಳು | ಶಿಕ್ಷಕರು | **ಪೂ.ಸಿ.ಚ. :–** ಶಿಕ್ಷಕರು ಈ ಕೆಳಗಿನಂತೆ ಪ್ರಶ್ನೆ ಕೇಳಿ ಪುನರಾವರ್ತನೆ ಮಾಡುವರು.<br>1) 1 ಕಿಲೋಗ್ರಾಂ. = ................. ಗ್ರಾಂ.<br>2) 1/2 ಕಿಲೋಗ್ರಾಂ. = ................. ಗ್ರಾಂ.<br>3) 1/4 ಕಿಲೋಗ್ರಾಂ. = ................. ಗ್ರಾಂ. | ವಿಜ್ಞಾನ<br>ಸಜೀವಿಗಳ ಗುಣಲಕ್ಷಣಗಳು, ಚಲನೆ, ಉಸಿರಾಟ | * ಸಜೀವಿಗಳು ನಿರ್ಜೀವಿಗಳಿಗಿರುವ ಗುಣಲಕ್ಷಣಗಿಂತ ವಿಶೇಷವಾದ ಗುಣಲಕ್ಷಣಗಳನ್ನು ಹೊಂದಿವೆ ಎಂದು ತಿಳಿಯುವರು. | ಚಾರ್ಟ್ಸ್ | ಹಿರೇಮಣಿ | * ವಿದ್ಯಾರ್ಥಿಗಳಲ್ಲಿ 2 ತಂಡ ಮಾಡಿ ನಿಲ್ಲಿಸಿ.<br>ಜೈವಿಕ ___ ___ / ಅಜೈವಿಕ ___ ___<br>ವಸ್ತುಗಳನ್ನು ಕ.ಹ. ಮೇಲೆ ಪಟ್ಟಿ ಮಾಡಿಸುವರು.<br>* ಸ್ಪರ್ಧಾ ವಾತಾವರಣ ನಿರ್ಮಿಸುವರು. |
| | 30 ನಿಮಿಷ | | | | | **ಕಲಿಕಾ ಚಟುವಟಿಕೆ :–** * ಶಿಕ್ಷಕರು 2 ಮಾದರಿಯ ಲೆಕ್ಕಗಳನ್ನು ಮಾಡಿ ತಿಳಿಸುವರು.<br>120 ಕಿಲೋಗ್ರಾಂ ಅಕ್ಕಿಯನ್ನು 10 ಕಿ.ಗ್ರಾಂ ಚೀಲಗಳಾಗಿ ಕಟ್ಟಿದರೆ ಎಷ್ಟು ಚೀಲಗಳಾಗುತ್ತವೆ.<br>ಸಮಸ್ಯೆ → ವಿಶ್ಲೇಷಣೆ → ಸಮಸ್ಯೆ ಬಿಡಿಸುವ ವಿಧಾನ → ಸಮಸ್ಯೆ ಪರಿಹಾರ → ತಾಳೆ ನೋಡುವಿಕೆ<br>120/10 = 12 ಚೀಲಗಳು<br>* ನಿತ್ಯ ಜೀವನದ ಉದಾ:ಗಳೊಂದಿಗೆ ಅನ್ವಯಿಸಿ ಲೆಕ್ಕ ಮಾಡಿಸುವರು.<br>* ವಿದ್ಯಾರ್ಥಿಗಳಿಗೆ ಲೆಕ್ಕಗಳನ್ನು ಬರೆದ ಮಿಂಚು ಪಟ್ಟಿ ವಿತರಿಸಿ ಲೆಕ್ಕ ಮಾಡಿಸುವರು. | | | | | * ಹಿರೇಮಣಿಯು ಬೇರೆ ಬೇರೆ ರೀತಿಯ ಸಸ್ಯಗಳನ್ನು, ಅವುಗಳ ಭಾಗಗಳನ್ನು ತೋರಿಸುವರು.<br>* **ಸಸ್ಯಗಳ** – ಪ್ರಾಣಿಗಳ ಬೆಳವಣಿಗೆ ಕುರಿತು ಬರೆಯುವರು. |
| | 10 ನಿಮಿಷ<br>30 ನಿಮಿಷ | ಕೇಳಿ ಕಲಿ | | ಪಾಠಕ್ಕೆ ಪೂರಕವಾದ ಕಲಿಕಾಂಶ ಸಾಮಗ್ರಿಗಳು | ಹಿರೇಮಣಿ | * ಶಿಕ್ಷಕರು ಪ್ರಸಾರ ಪೂರ್ವ ಚಟುವಟಿಕೆಗಳನ್ನು ಮಾಡಿಸುವರು.<br>* ಬಾನುಲಿಯಿಂದ ಮೂಡಿ ಬರುವ "ಕೇಳಿ ಕಲಿ" ಹಿರೇಮಣಿ ನೇತೃತ್ವದಲ್ಲಿ ಆಲಿಸುವರು.<br>* ಪ್ರಸಾರ ನಂತರದ ಚಟುವಟಿಕೆಗಳನ್ನು ಹಿರೇಮಣಿಯು ಶಿಕ್ಷಕರು ನೀಡಿದ ಸೂಚನೆಯನುಸಾರವಾಗಿ ಮಾಡಿಸುವರು. | ಸಮಾಜ ವಿಜ್ಞಾನ<br>ಸಿಂಧೂ ನಾಗರಿಕತೆ (ಮುಂದುವರಿಕೆ) | * ಭಾರತದಲ್ಲಿ ಪ್ರಾಚೀನ ಕಾಲದಲ್ಲಿ ಉಚ್ಚಮಟ್ಟದ ನಾಗರಿಕತೆ ಇತ್ತು ಎಂಬುದನ್ನು ತಿಳಿದು ಅಭಿಮಾನಪಡುವುದು.<br>* ಅದರೊಂದಿಗೆ ಇಂದಿನ ನಾಗರಿಕತೆ ಹೋಲಿಸಿ ವಿಮರ್ಶಿಸುವುದು. | ಪಠ್ಯಪುಸ್ತಕ, ಚಿತ್ರಪಟ | ಶಿಕ್ಷಕರು | * ಶಿಕ್ಷಕರು ಹಿಂದಿನ ಅವಧಿಯ ಪಾಠಬೋಧನೆಯನ್ನಾಧರಿಸಿ ಪ್ರಶ್ನೆಗಳನ್ನು ಕೇಳುವರು.<br>**ಕ.ಚ. :–** * ಶಿಕ್ಷಕರು ಇಂದಿನ ಕೆಲವು ಆಭರಣಗಳ ಮಾದರಿಗಳನ್ನು ಚಿತ್ರಗಳನ್ನು ಪ್ರದರ್ಶಿಸುವರು.<br>* ಸಿಂಧೂ ನಾಗರಿಕತೆಯ ಜನರ ಆಭರಣಗಳ ಬಗ್ಗೆ ತಿಳಿಸುವರು. ಹಾರ, ಬಳೆ, ಓಲೆ, ಡಾಬು......... ಇತ್ಯಾದಿ.<br>* **ಕ್ರೀಡೆ ಹಾಗೂ ವಿನೋದಗಳು :**<br>ಇಂದಿನ ಆಟಗಳನ್ನು ಹಿಂದಿನ ಕಾಲದ ಅವರ ಆಟಗಳನ್ನು ಹೋಲಿಸುವರು. ನಾಟ್ಯ, ಬೇಟೆ, ಹುಂಜದಕಾಳಗ, ಈಜುಕೊಳ ಇತ್ಯಾದಿಗಳು.<br>* ಹಿಂದಿನ – ಇಂದಿನ ಜನಪ್ರಿಯ ಆಟಗಳ ಬಗ್ಗೆ ವಿವರಿಸುವರು. |

# 27ನೇ ದಿನ



| ಅವಧಿ | ಸಮಯ ಹಂಚಿಕೆ | ನಾಲ್ಕನೇ ತರಗತಿ | | | | | ಐದನೇ ತರಗತಿ | | | | |
|---|---|---|---|---|---|---|---|---|---|---|---|
| | | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| ನಾಲ್ಕನೇ ಅವಧಿ | 10 ನಿಮಿಷ | ಪರಿಸರ ಅಧ್ಯಯನ<br>ನಮ್ಮ ದೇಹ ವಿಸರ್ಜನೆ ಕ್ರಿಯೆ | * ಸ್ವಚ್ಛತೆಯ ಅಭ್ಯಾಸದಿಂದ ಈ ಅಂಗಗಳ ಆರೋಗ್ಯ ಕಾಪಾಡಿಕೊಳ್ಳುವ ಅರಿವನ್ನುಂಟು ಮಾಡುವುದು. (ಪುನರಾವರ್ತನೆ) | ಮಿಂಚು ಪಟ್ಟಿಗಳು | ಹಿರೇಮಣಿ | **ಕ.ಪೂ.ಚ :–** ವೃತ್ತದಲ್ಲಿ ನಿಲ್ಲಿಸಿ ಬಾಯಿ, ಕಣ್ಣು, ಮೂಗು, ಕಿವಿ, ಚರ್ಮ, ಈ ಅವಯವಗಳನ್ನು ಕ್ರಮವಾಗಿ ಹೇಳಿಸಿ ತಂಡ ರಚನೆ ಮಾಡುವರು. | **ಸಮಾಜ ವಿಜ್ಞಾನ**<br>**ಸಿಂಧೂ ನಾಗರಿಕತೆ – (ಮುಂದುವರಿಕೆ)** | * ಭಾರತದಲ್ಲಿ ಪ್ರಾಚೀನ ಕಾಲದಲ್ಲಿಯೇ ಉಚ್ಚಮಟ್ಟದ ನಾಗರೀಕತೆ ಇತ್ತು ಎಂಬುದನ್ನು ತಿಳಿದು ಅಭಿಮಾನಪಡುವರು. | ಚಿತ್ರಪಟ, ಲಿಪಿಯ ಮಾದರಿಗಳು | ಶಿಕ್ಷಕರು | **ಪೂ.ಸಿ.ಚ. :–** * ಶಿಕ್ಷಕರು ಹಿಂದಿನ ಅವಧಿಯ ಬೋಧನೆ ಯನ್ನಾಧರಿಸಿ ಪ್ರಶ್ನೋತ್ತರ ಚರ್ಚಿಸುವರು. |
| | | | | | | **ಅಭ್ಯಾಸ ಚ :–**<br>* ತಂಡಕ್ಕೊಂದು ಪ್ರಶ್ನಾವಳಿ ಪಟ್ಟಿ ಕೊಟ್ಟು ಉತ್ತರ ಬರೆಯಲು ಹೇಳುವರು.<br>* ಪ್ರತಿ ತಂಡದವರು ದೇಹದ ಅಂಗಗಳ ಆರೋಗ್ಯಕ್ಕಾಗಿ ಯಾವ ಯಾವ ಅಭ್ಯಾಸಗಳನ್ನು ರೂಢಿಸಿಕೊಳ್ಳುವಿರಿ ಪಟ್ಟಿ ಮಾಡಿರಿ.<br>* ನಿಯಮಿತವಾಗಿ ವ್ಯಾಯಾಮ ಮಾಡುವುದು ಅಗತ್ಯ, ಏಕೆ ?<br>* ಬಾಯಿ, ಹಲ್ಲು, ಸ್ವಚ್ಛಗೊಳಿಸುವುದು ಏಕೆ ? | | | | | **ಕ.ಚ. :–** * ಶಿಕ್ಷಕರು ಚಿತ್ರಪಟವನ್ನು ತೋರಿಸುತ್ತ ವಿಷಯ ವಿವರಿಸುವರು. ಇಂದಿನ – ಹಿಂದಿನ ಮತ–ಧರ್ಮಗಳ ಪಾಲನೆಯ ಕುರಿತು ವಿವರಿಸುವರು.<br>* ಪಶುಪತಿ, ಶಿವ, ನಾಗ, ವೃಕ್ಷ, ಬಸವ ಮುಂತಾದವುಗಳನ್ನು ಪೂಜಿಸುತ್ತಿದ್ದರು.<br>* ಸಂದೇಶ ರವಾನೆಗಾಗಿ ಚಿತ್ರಾಕ್ಷರಗಳನ್ನು ಬಳಸುತ್ತಿದ್ದರು. 300–400 ಚಿತ್ರ ಲಿಪಿಗಳು ಪತ್ತೆಯಾಗಿವೆ. |
| | 35 ನಿಮಿಷ | | | | | * ಶಿಕ್ಷಕರು ಹಿಂದಿನ ಚಟುವಟಿಕೆ ಪರಿಶೀಲಿಸುವರು. | | | | | |
| | 25 ನಿಮಿಷ | | | ಮಾದರಿ, ಚಿತ್ರಪಟ | ಶಿಕ್ಷಕರು | **ಕ.ಚ. :–**<br>* ಶಿಕ್ಷಕರು ಉದಾ:ಗಳೊಂದಿಗೆ ವಿಸರ್ಜನ ಕ್ರಿಯೆ ಬಗ್ಗೆ ವಿವರಿಸುವರು. (ಮಾದರಿ, ಚಿತ್ರಪಟ ಪ್ರದರ್ಶಿಸುತ್ತ),<br>* ದೇಹಕ್ಕೆ ಬೇಡವಾದ ಕಶ್ಮಲಗಳನ್ನು ಹೊರಹಾಕುವುದು.<br>* ಈ ಕಶ್ಮಲಗಳು ದೇಹಕ್ಕೆ ಹಾನಿಯನ್ನುಂಟು ಮಾಡುತ್ತವೆ.<br>* $CO_2$ – ಶ್ವಾಸಕೋಶದ ಮೂಲಕ.<br>* ದ್ರವರೂಪದ ಕಶ್ಮಲ(ಮೂತ್ರ) – ಮೂತ್ರಜನಕಾಂಗ<br>* ಬೆವರು – ಚರ್ಮ<br>* ಮುಖ್ಯ ವಿಸರ್ಜನಾಂಗಗಳು : ಶ್ವಾಸಕೋಶ, ಮೂತ್ರಜನಕಾಂಗ, ಚರ್ಮ, | **ಸಾ. ಉ. ಉ. ಕಾ.** | * ಹಳೆಯ ವೃತ್ತಪತ್ರಿಕೆಗಳ ಚಿತ್ರಗಳನ್ನು ಬಳಸಿ ಆಲ್ಬಂ ತಯಾರಿಸುವ ಕೌಶಲ ಬೆಳೆಸುವರು. | ಹಳೆಯ ವೃತ್ತಪತ್ರಿಕೆ ಅಂಟು, ಕತ್ತರಿ. | ಹಿರೇಮಣಿ | ಶಿಕ್ಷಕರ ಸೂಚನೆಯಂತೆ ವೃತ್ತಪತ್ರಿಕೆಯಲ್ಲಿ ಪ್ರಸಾರವಾದ ಪ್ರಾಕೃತಿಕ ವಿಕೋಪಗಳ ಚಿತ್ರಪಟಗಳಿಂದ ಆಲ್ಬಂ ತಯಾರಿಸುವರು.<br>**ಉದಾ :** ಸುನಾಮಿಯಿಂದಾದ ಅನಾಹುತಗಳ ಚಿತ್ರಪಟ. ಭಾರಿ ಮಳೆಯಿಂದಾದ ಅನಾಹುತ ಚಿತ್ರಪಟ |
| | 10 ನಿಮಿಷ | | | | | **ಅಭ್ಯಾಸ /ಬಳಕೆ ಚ :–**<br>* ವಿಸರ್ಜನಾಂಗ ಕ್ರಿಯೆಯ ಚಿತ್ರ ಬರೆದು ಭಾಗಗಳನ್ನು ಗುರ್ತಿಸುವರು. | | | | | |

# 28ನೇ ದಿನ



| ಅವಧಿ | ಸಮಯ ಹಂಚಿಕೆ | ನಾಲ್ಕನೇ ತರಗತಿ | | | | | ಐದನೇ ತರಗತಿ | | | | |
|---|---|---|---|---|---|---|---|---|---|---|---|
| | | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| ಒಂದನೇ ಅವಧಿ | 10 ನಿಮಿಷ | **ಕನ್ನಡ**<br>**ಅಜ್ಜಿಯ ಜಂಬ (ಮುಂದುವರೆದ ಪಾಠ)** | * ಲೇಖನ ಚಿನ್ಹೆಗಳನ್ನುಪಯೋಗಿಸಿ ಓದುವ ಬರೆಯುವ ಕೌಶಲ ಬೆಳೆಸುವುದು. | ಪಾಠಕ್ಕೆ ಸಂಬಂಧಿಸಿದ ಚಿತ್ರಪಟಗಳು | ಶಿಕ್ಷಕರು | **ಪೂರ್ವ ಸಿದ್ಧತಾ ಚಟುವಟಿಕೆ. :–**<br>"ಮೂಡುವ ಸೂರ್ಯನ ನೋಡುತ ನಿಂತೆ<br>ತಟ್ಟನೆ ನೆನಪಾಯ್ತು.<br>ಇದುವೇ ಅಲ್ಲವೆ ಪೂರ್ವದ ದಿಕ್ಕು<br>ತಿಳಿಯಿತ ನನಗೆ ಖುಷಿಯಾಯ್ತು".<br>ಹೀಗೆ ಚುಕ್ಕಿ ಚಿನ್ನಾ ಪುಸ್ತಕದ ಪುಟಸಂಖ್ಯೆ–130ರ ಚಟುವಟಿಕೆಯನ್ನು ಅಭಿನಯದ ಮೂಲಕ ಹೇಳಿ ಕೊಡುವರು. | | | | | |
| | 40 ನಿಮಿಷ | | | | | **ಕಲಿಕಾಂಶ ಚಟುವಟಿಕೆ :–**<br>ಶಿಕ್ಷಕರು ಪಾಠವನ್ನು ಸೂಕ್ತ ಲೇಖನ ಚಿಹ್ನೆಗಳು ಸ್ವರಭಾರದೊಂದಿಗೆ ಸ್ಪಷ್ಟವಾಗಿ ನಿಧಾನವಾಗಿ ಓದುವರು.<br>ಮಕ್ಕಳಿಂದ ಓದಿಸುವರು, ನಂತರ ಶಿಕ್ಷಕರು ಪಾಠದ ಅರ್ಥ ವಿವರಣೆಯನ್ನು ಹೇಳುವರು. ನೀತಿ ಕಥೆಗಳಲ್ಲಿ ಆಸಕ್ತಿ ಮೂಡಿಸುವರು "ಅಹಂಕಾರಕ್ಕೆ ಉದಾಸೀನವೇ ಮದ್ದು" ಎಂಬುದನ್ನು ಮಕ್ಕಳಿಗೆ ಮನವರಿಕೆ ಮಾಡಿ ಕೊಡುವರು. | | | | | **5ನೆಯ ತರಗತಿಯ ಮಕ್ಕಳನ್ನು 3ನೇ ತರಗತಿಯ ಶಿಕ್ಷಕರು ಹೊಂದಾಣಿಕೆ ಮಾಡಿಕೊಂಡಿರುತ್ತಾರೆ.** |
| | 20 ನಿಮಿಷ | | | | | **ಅಭ್ಯಾಸ ಚಟುವಟಿಕೆ :–**<br>ಆಮೆ ಮತ್ತು ಮೊಲದ ಓಟದ ಕಥೆಯನ್ನು ಚಾರ್ಟ್‌ನಲ್ಲಿ ಓದುವರು. | | | | | |

| ಅವಧಿ | ಸಮಯ ಹಂಚಿಕೆ | ನಾಲ್ಕನೇ ತರಗತಿ: ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ಐದನೇ ತರಗತಿ: ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
|---|---|---|---|---|---|---|---|---|---|---|---|
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| ಎರಡನೇ ಅವಧಿ | 10 ನಿಮಿಷ | **ಗಣಿತ**<br>**ಜ್ಯಾಮಿತಿ** | * ಅಳತೆ ಪಟ್ಟಿಯ ಸಹಾಯದಿಂದ 15 ಸೆಂ.ಮೀ ಮೀರದಂತೆ ಪೂರ್ಣ ಸೆಂಟಿಮೀಟರ್‌ಗಳಲ್ಲಿ ಹಾಗೂ ಅರ್ಧ ಸೆಂಟಿಮೀಟರ್‌ಗಳಲ್ಲಿ ಗೊತ್ತಾದ ಸರಳ ರೇಖಾಖಂಡಗಳನ್ನು ಎಳೆದು ಅಳೆಯುತ್ತಾರೆ. | ಬಿಳಿ ಹಾಳೆ, ದಾರದ ಉಂಡೆ, ಸರಳರೇಖೆ ಮತ್ತು ವಕ್ರರೇಖೆಗಳುಳ್ಳ ಚಿತ್ರಪಟ ಅಳತೆ ಪಟ್ಟಿ | ಶಿಕ್ಷಕರು | **ಪೂರ್ವ ಸಿದ್ಧತಾ ಚಟುವಟಿಕೆ. :–**<br>"ಬಿಂದುವೊಂದು ಚಲಿಸುವ ದಾರಿಯೇ ರೇಖೆ ನೇರವಾಗಿ ಇದ್ದರೆ ಅದೇ ಸರಳ ರೇಖೆ, ಬಿಂದು ಚಲಿಸುವ ದಾರಿ ನೇರವಾಗಿರದೆ ವಕ್ರವಾಗಿದ್ದರೆ" ಎಂಬ ಅಭಿನಯ ಗೀತೆಯನ್ನು ಹೇಳಿಕೊಡುವರು. (ಚುಕ್ಕಿ ಚಿನ್ನಾ ಪುಟಸಂಖ್ಯೆ–138 ನೋಡಿ) | | | | | |
| | 40 ನಿಮಿಷ | | | | | **ಕಲಿಕಾಂಶ ಚಟುವಟಿಕೆ :–**<br>ಚಿತ್ರಪಟಗಳ ಮೂಲಕ ಸರಳರೇಖೆ, ವಕ್ರರೇಖೆ ಇವುಗಳ ಕಲ್ಪನೆ ಮೂಡಿಸಿ ಹಲವಾರು ಚಟುವಟಿಕೆಗಳಿಂದ ಅಳತೆ ಪಟ್ಟಿಯ ಸಹಾಯದಿಂದ ಹಾಗೂ ವಿಭಾಜಕದ ಉಪಯೋಗದಿಂದ ಸರಳ ರೇಖೆಯನ್ನು ಎಳೆಯುವುದನ್ನು ಮತ್ತು ಅಳೆಯುವುದನ್ನು ಹೇಳಿಕೊಡುವರು. | | | | | |
| | 20 ನಿಮಿಷ | | | | | **ಅಭ್ಯಾಸ ಚಟುವಟಿಕೆ :–**<br>ಅಭ್ಯಾಸದ ಲೆಕ್ಕಗಳನ್ನು (ಪುಟ ಸಂಖ್ಯೆ 73 ರಿಂದ 74) ಮಾಡಿಸುವರು. | | | | | |
| | 10 ನಿಮಿಷ | | | | | **ಮೌಲ್ಯಮಾಪನ ಚಟುವಟಿಕೆ :–**<br>* ಅಂಚೆ ಕಾರ್ಡಿನ ಉದ್ದ, ಅಗಲ ಅಳೆಯುವರು.<br>* 5 ರೂ, 10 ರೂ, 20 ರೂ, 50 ರೂ, 100 ರೂ ನೋಟಿನ ಉದ್ದ, ಅಗಲ ಅಳೆದು ಹೇಳುವರು. | | | | | |

**5ನೆಯ ತರಗತಿಯ ಮಕ್ಕಳು 3ನೇ ತರಗತಿಯ ಶಿಕ್ಷಕರೊಂದಿಗೆ ಇರುತ್ತಾರೆ.**

| ಅವಧಿ | ಸಮಯ ಹಂಚಿಕೆ | ನಾಲ್ಕನೇ ತರಗತಿ | | | | | ಐದನೇ ತರಗತಿ | | | | |
|---|---|---|---|---|---|---|---|---|---|---|---|
| | | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯ | ಕಲಿಕಾ ಸಾಮಗ್ರಿಗಳು | ವಿಧಾನ | ಕಲಿಕಾ ಪ್ರಕ್ರಿಯೆ | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯ | ಕಲಿಕಾ ಸಾಮಗ್ರಿಗಳು | ವಿಧಾನ | ಕಲಿಕಾ ಪ್ರಕ್ರಿಯೆ |
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| ಮೂರನೇ ಅವಧಿ | 10 ನಿಮಿಷ | **ಪರಿಸರ ಅಧ್ಯಯನ (ಮುಂ. ಭಾಗ) ನಮ್ಮ ದೇಹ** | * ದೇಹದಲ್ಲಿ ನಡೆಯುವ ಮುಖ್ಯ ಕ್ರಿಯೆಗಳು ಮತ್ತು ಅವುಗಳಿಗೆ ಸಂಬಂಧಪಟ್ಟ ಮುಖ್ಯ ಅಂಗಗಳ ಪರಿಚಯ | ಪ್ಲಾಸ್ಟಿಕ್ ನಾಳಗಳು, T ಆಕಾರದ ನಾಳಗಳು ಆಲಿಕಗಳು ಪ್ಲಾಸ್ಟಿಕ್ ಮತ್ತು ರಬ್ಬರ್ ಬ್ಯಾಂಡ್ | ಹಿರೇಮಣಿ | **ಸೂಚನೆ :–**<br>ಸೂಚನೆ ನೀಡಿ ಗುಂಪುಗಳನ್ನಾಗಿ ಮಾಡಿ ಪ್ರತಿ ಗುಂಪಿನಿಂದ ಸ್ಟೆತೋಸ್ಕೋಪ್ ತಯಾರಿಸುವಂತೆ ಮಾದರಿ ತೋರಿಸಿ ತಿಳಿಸುವರು.<br><br>ಹಿರೇಮಣಿ ನಿರ್ವಹಣೆಯ ಮೂಲಕ ಸ್ಥೆತೋಸ್ಕೋಪ್ ತಯಾರಿಸುವರು. | **Do you agree ?** | Learn to express positive and negativie answers. | Things found around | T E A C H E R | Teacher ask the children to recite the rhyme we're the sheep Ba Ba..........<br><br>Teacher starts new activity.<br><br>**Learning Activity :-**<br>Teacher presents the content in a conversational tone (page no. 33). Then teacher calls children in their turns, points to an object in the classroom and ask.<br>Is this a chair ?<br>Yet it is<br>Is that a black board ?<br>No it isn't............... |
| | 30 ನಿಮಿಷ | | | | | ಸ್ತೆಥಾಸ್ಕೋಪಿನ ಉಪಯೋಗಗಳ ಪಟ್ಟಿ ಮಾಡುವರು ಅನಂತರ ಮಕ್ಕಳು ಸ್ತೆಥಾಸ್ಕೋಪ್‌ನ್ನು ವಿನಿಮಯ ಮಾಡಿಕೊಂಡು ಹೃದಯದ ಬಡಿತ ಪರೀಕ್ಷಿಸಿಕೊಳ್ಳುವಂತೆ ಅವಕಾಶ ಕಲ್ಪಿಸಿಕೊಡುವರು. | | | | | |
| | 20 ನಿಮಿಷ<br><br>20 ನಿಮಿಷ | | | | ಶಿಕ್ಷಕರು | **ಅಭ್ಯಾಸ ಚಟುವಟಿಕೆ :**<br>ಸ್ತೆಥಾಸ್ಕೋಪ್ ರೀತಿಯಂತೆ ದೂರವಾಣಿ ತಯಾರಿಸುವಂತೆ ಮಾರ್ಗದರ್ಶನ ನೀಡುವರು.<br><br>**ಮೌಲ್ಯಮಾಪನ ಚಟುವಟಿಕೆ :**<br>1) ಒಂದು ನಿಮಿಷಕ್ಕೆ ಹೃದ್ಯಯದ ಬಡಿತ__________.<br>2) ______ ಪರೀಕ್ಷೆಗೆ ಸ್ತೆಥಾಸ್ಕೋಪ್ ಬಳಸುತ್ತಾರೆ. | **ಸಮಾಜ ಸಿಂಧೂ ನಾಗರೀಕತೆ** | * ಭಾರತದ ಪ್ರಾಚೀನ ಕಾಲದಲ್ಲಿಯೇ ಉನ್ನತವಾದ ನಾಗರೀಕತೆ ಇತ್ತು ಎಂಬುದನ್ನು ಅರ್ಥೈಸಿಕೊಳ್ಳುವರು. | ಸಂದರ್ಭ ಕಾರ್ಡುಗಳು | ಹಿರೇಮಣಿ | ಶಿಕ್ಷಕರು ಮಕ್ಕಳಿಗೆ ಸೂಚನೆ ನೀಡುವರು.<br><br>* ನಿಮ್ಮ ಊರಿನ ಹಿರಿಯ ಮಹಿಳೆಯರನ್ನು ಹಾಗೂ ಕಿರಿಯ ಮಹಿಳೆಯರನ್ನು ಭೇಟಿ ಮಾಡಿ ಅಂದಿನ ಮತ್ತು ಇಂದಿನ ಅಲಂಕಾರ ಸಾಧನಗಳನ್ನು ಪಟ್ಟಿ ಮಾಡುವಂತೆ ಮಾರ್ಗದರ್ಶನ ನೀಡುವರು. |

# 28ನೇ ದಿನ



| | | ನಾಲ್ಕನೇ ತರಗತಿ | | | | | ಐದನೇ ತರಗತಿ | | | | |
|---|---|---|---|---|---|---|---|---|---|---|---|
| ಅವಧಿ | ಸಮಯ ಹಂಚಿಕೆ | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| ನಾಲ್ಕನೇ ಅವಧಿ | 05 ನಿಮಿಷ<br>35 ನಿಮಿಷ<br>40 ನಿಮಿಷ | **ಸಾ. ಉ. ಉ. ಕಾ.**<br>**ಕ್ಯಾಲೆಂಡರ್ ತಯಾರಿಕೆ** | ಕ್ಯಾಲೆಂಡರ್ ತಯಾರಿಸುವ ಕೌಶಲ ಬೆಳೆಸಿಕೊಳ್ಳುವರು. | ಹಳೆಯ ಲಗ್ನಪತ್ರಿಕೆ, ಹಳೆಯ ಕ್ಯಾಲೆಂಡರ್, ಫೆವಿಕಲ್, ಕತ್ತರಿ, ಹಳೆಯ ಚಿತ್ರಗಳು (ದೇವರ) ಸ್ಕೆಚ್‌ಪೆನ್ | ಹಿರೇಮಣಿ | ಹಳೆಯ ಕ್ಯಾಲೆಂಡರ್‌ನಲ್ಲಿರುವ ಸಂಖ್ಯೆಗಳನ್ನು ಕತ್ತರಿಸಿಕೊಳ್ಳುವಂತೆ ಸೂಚನೆ ನೀಡುವರು.<br>ಸಂಖ್ಯೆಗಳ ಮಿಂಚುಪಟ್ಟಿ ತಯಾರಿಸುವರು.<br>1 ರಿಂದ 31 ರವರೆಗಿನ ಸಂಖ್ಯೆಗಳ ಮಿಂಚುಪಟ್ಟಿ ವಾರಗಳ, ತಿಂಗಳುಗಳ ಮಿಂಚುಪಟ್ಟಿ ತಯಾರಿಸಿಕೊಳ್ಳಲು ಸೂಚಿಸುವರು. | **ವಿಜ್ಞಾನ**<br>**ಸಜೀವಿಗಳ ಗುಣಲಕ್ಷಣಗಳು (ಮುಂ. ಪಾಠ)** | ಸಜೀವಿಗಳು ನಿರ್ಜೀವಿಗಳಿಗಿರುವ ಗುಣಲಕ್ಷಣಗಳಿಗಿಂತ ವಿಶಿಷ್ಟವಾದ ಗುಣಲಕ್ಷಣ ಹೊಂದಿವೆ ಎಂದು ತಿಳಿಯುವರು. | ಚಿತ್ರಪಟಗಳು, ಗಾಜಿನ ಲೋಟ, ಸ್ಟ್ರಾ, ಸುಣ್ಣ | ಶಿಕ್ಷಕರು | **ಪೂ.ಸಿ.ಚ. :–**<br>ಚಲನೆ ಮತ್ತು ಉಸಿರಾಟಕ್ಕೆ ಸಂಬಂಧಿಸಿದಂತೆ ಸರಳ ಪ್ರಶ್ನೆ ಕೇಳಿ ಉತ್ತರ ಪಡೆಯುವರು.<br>**ಕಲಿಕಾಂಶ ಚಟುವಟಿಕೆ :–**<br>ಚಿತ್ರಪಟಗಳ ಪ್ರದರ್ಶನದೊಂದಿಗೆ ಚಲನೆ ಮತ್ತು ಉಸಿರಾಟದ ಬಗ್ಗೆ ವಿವರಣೆ ನೀಡುವರು.<br>ಚಟುವಟಿಕೆ–1 : ನಾವು ಹೊರಬಿಡುವ ಗಾಳಿಯಲ್ಲಿ ಇಂಗಾಲದ ಡೈ ಆಕ್ಸೈಡ್ ಇದೆ ಎಂಬುದನ್ನು ಪ್ರಯೋಗದ ಮೂಲಕ ವಿವರಿಸುವರು.<br>**ಅಭ್ಯಾಸ ಚಟುವಟಿಕೆ :–**<br>ಮೇಲ್ಕಂಡ ಚಟುವಟಿಕೆಯನ್ನು ಅಭ್ಯಾಸ ಮಾಡಿಸುವರು.<br>**ಮೌಲ್ಯಮಾಪನ ಚಟುವಟಿಕೆ :–**<br>* ಉಸಿರಾಟ ಕ್ರಿಯೆ ಎಂದರೇನು ?<br>* ಸಸ್ಯಗಳು ನಮಗೆ ಏನನ್ನು ಕೊಡುತ್ತವೆ ? |
| | | | | | ಶಿಕ್ಷಕರು | 4 ಮತ್ತು 5ನೆಯ ತರಗತಿಗಳನ್ನು ಹೊಂದಾಣಿಕೆ ಮಾಡಿಕೊಂಡು ಶಿಕ್ಷಕರ ಮಾರ್ಗದರ್ಶನದೊಂದಿಗೆ ಹೊಸ ವರ್ಷದ ಕ್ಯಾಲೆಂಡರ್‌ಗಳನ್ನು ತಯಾರಿಸುವರು. ಮೇಲೆ ತಯಾರಿಸಿದ ಮಿಂಚುಪಟ್ಟಿ ಬಳಸಿಕೊಳ್ಳುವರು. | | | | | |



# 29ನೇ ದಿನ

| | | ನಾಲ್ಕನೇ ತರಗತಿ | | | | | ಐದನೇ ತರಗತಿ | | | | |
|---|---|---|---|---|---|---|---|---|---|---|---|
| ಅವಧಿ | ಸಮಯ ಹಂಚಿಕೆ | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| ಒಂದನೇ ಅವಧಿ | 20 ನಿಮಿಷ | **ಕನ್ನಡ**<br>**ಅಜ್ಜಿಯ ಜಂಭ (ಮುಂದುವರೆದ ಪಾಠ)** | * ಸರಳ ಲೇಖನ ಚಿಹ್ನೆಗಳಿರುವ ಉಕ್ತಲೇಖನ ತೆಗೆದುಕೊಳ್ಳುವುದು. | ಪಠ್ಯಪುಸ್ತಕ, ಅಭ್ಯಾಸದ ಹಾಳೆಗಳು | ಶಿಕ್ಷಕರು | **ಪೂರ್ವ ಸಿದ್ಧತಾ ಚಟುವಟಿಕೆ. :–**<br>ಅಜ್ಜಿಯ ಜಂಭ ಕತೆಯನ್ನು ಮಕ್ಕಳ ಮಾತಿನಲ್ಲಿ ಹೇಳುವಂತೆ ಪ್ರೇರೇಪಿಸುವರು. | | | | | |
| | 40 ನಿಮಿಷ | | | | | **ಅಭ್ಯಾಸ ಚಟುವಟಿಕೆ :**<br>I. ಪ.ಪುಸ್ತಕದಲ್ಲಿನ ಅಭ್ಯಾಸದಲ್ಲಿರುವ ಪ್ರಶ್ನೆಗಳಿಗೆ ಕ॥ ಹ॥ ಮೇಲೆ ಉತ್ತರ ಬರೆಸಿ ಮಕ್ಕಳು ಬರೆದುಕೊಳ್ಳುವಂತೆ ತಿಳಿಸುವರು.<br>ಉದಾ:– (1) ಅಜ್ಜಿ ಎಲ್ಲಿ ವಾಸವಾಗಿದ್ದಳು ?<br>2) ಅಜ್ಜಿಗೆ ಏಕೆ ಜಂಭ ಬಂದಿತು ?<br>3) ಅಜ್ಜಿ ಕಾಡಿಗೆ ಏಕೆ ಹೋದಳು ?<br>II. ಕೊಟ್ಟಿರುವ ಮಾತುಗಳನ್ನು ಯಾರು ಯಾರಿಗೆ ಹೇಳಿದರು ?<br>1) "ಕೋಳಿ ಇಲ್ಲದೆ ಇವರೆಲ್ಲ ಹೇಗೆ ಏಳುತ್ತಾರೆ ?"<br>2) "ಏನಪ್ಪಾ ಪ್ರತಿದಿನ ಬೆಳಗಾಗುತ್ತಿದೆಯೇ ?"<br>ಮೇಲಿನಂತೆ ಶಿಕ್ಷಕರು ಪಠ್ಯಪುಸ್ತಕದಲ್ಲಿನ ಅಭ್ಯಾಸಗಳನ್ನು ಮಾಡಿಸುವರು. | | | | | |
| | 10 ನಿಮಿಷ | | | | | ಬರೆಸಿದ ಪ್ರಶ್ನೋತ್ತರಗಳನ್ನು ಮಕ್ಕಳು ಓದುವರು. | | | | | |
| | 10 ನಿಮಿಷ | | | | | ಲೇಖನ ಚಿಹ್ನೆ ಮಿಂಚುಪಟ್ಟಿಗಳ ವಿವರಣೆ ಬರೆಯುವರು. | | | | | |

5ನೇಯ ತರಗತಿಯ ಮಕ್ಕಳು 3ನೇ ವರ್ಗದೊಂದಿಗೆ ಹೊಂದಾಣಿಕೆಯಾಗಿರುತ್ತಾರೆ.

| ಅವಧಿ | ಸಮಯ ನಿಗದಿ | ನಾಲ್ಕನೇ ತರಗತಿ | | | | | ಐದನೇ ತರಗತಿ | | | | |
|---|---|---|---|---|---|---|---|---|---|---|---|
| | | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯಗಳು | ಬೋಧನೋಪಕರಣಗಳು | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯಗಳು | ಬೋಧನೋಪಕರಣಗಳು | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| ಎರಡನೇ ಅವಧಿ | 10 ನಿಮಿಷ | ಪರಿಸರ ಅಧ್ಯಯನ<br>5. ಆಹಾರ ಆರೋಗ್ಯ | * ಪೌಷ್ಠಿಕಾಂಶಗಳನ್ನು ವರ್ಗೀಕರಿಸುವರು<br>* ವಿವಿಧ ಪೌಷ್ಠಿಕಾಂಶಗಳ ಅವಶ್ಯಕತೆಯನ್ನು ಮನಗಾಣುವರು | ಆಹಾರ ಪದಾರ್ಥಗಳಿಂದ, ತರಕಾರಿ, ಸೊಪ್ಪು, ಧಾನ್ಯಗಳು, ಚಾರ್ಟ್‌ಗಳು<br>ಪೌಷ್ಠಿಕಾಂಶವುಳ್ಳ ಆಹಾರ ವಸ್ತುಗಳ ಚಾರ್ಟ್‌ಗಳು | ಶಿಕ್ಷಕರು | **ಪೂರ್ವ ಸಿದ್ಧತಾ ಚಟುವಟಿಕೆ. :– ಹಾಡು**<br>"ನಾವು ತಿನ್ನುವ ಆಹಾರದಲ್ಲಿವೆ<br>ಬಹುವಿಧ ಪೋಷಕಾಂಶಗಳು<br>ಎಂಬ ಹಾಡನ್ನು ಸಾಮೂಹಿಕವಾಗಿ ಅಭಿನಯದೊಂದಿಗೆ"<br>ಹಾಡುವರು. (ಚುಕ್ಕಿ ಚಿನ್ನ ಪುಸ್ತಕದ ಪುಟ ಸಂ. 94ನ್ನು ನೋಡಿ) | 5ನೆಯ ತರಗತಿಯ ಮಕ್ಕಳು 3ನೇ ವರ್ಗದೊಂದಿಗೆ ಹೊಂದಾಣಿಕೆಯಾಗಿರುತ್ತಾರೆ. | | | | |
| | 40 ನಿಮಿಷ | | | | | **ಕಲಿಕಾಂಶ ಚಟುವಟಿಕೆ :–**<br>* ದೇಹಕ್ಕೆ ಪ್ರಯೋಜನಕಾರಿಯಾದ ಘಟಕಗಳೇ ಪೌಷ್ಠಿಕಾಂಶಗಳೆಂದು ಸೂಚಿಸುವರು.<br>* ಆಹಾರ ವಸ್ತುಗಳಿಂದ ದೇಹಕ್ಕೆ ಆರೋಗ್ಯ ಶಕ್ತಿ ಮತ್ತು ಬೆಳವಣಿಗೆಯುಂಟಾಗುತ್ತದೆ ಎಂದು ಅರಿಯುವರು.<br>* ದೇಹಕ್ಕೆ ಶಕ್ತಿಯನ್ನು ಕೊಡುವ ವಸ್ತುಗಳಿಗೆ ಶರ್ಕರ ಪಿಷ್ಟಗಳು / ಕಾರ್ಬೋಹೈಡ್ರೇಟ್‌ಗಳು ಎಂದು ಅರಿಯುವರು.<br>ಉದಾ: ಅಕ್ಕಿ, ರಾಗಿ, ಆಲೂಗಡ್ಡೆ, ಸಕ್ಕರೆ.<br>* ದೇಹದ ಬೆಳವಣಿಗೆಗೆ ಸಹಾಯ ಮಾಡುವ (ವಸ್ತುಗಳನ್ನು) ಪೌಷ್ಠಿಕಾಂಶಗಳು, ಪ್ರೋಟೀನುಗಳು ಎಂದು ಅರಿಯುವರು.<br>ಉದಾ: ಹುರುಳಿ, ಬಾದಾಮಿ, ಹಾಲು<br>* ದೇಹದ ಆರೋಗ್ಯವನ್ನು ಕಾಪಾಡುವ (ವಸ್ತುಗಳಿಗೆ) ಪೌಷ್ಠಿಕಾಂಶಗಳ ಜೀವಸತ್ವ ಎಂದು ಅರಿಯುವರು.<br>ಉದಾ: ಹಸಿರು ತರಕಾರಿ, ಮೊಟ್ಟೆ, ಹಣ್ಣುಗಳು | | | | | |
| | 30 ನಿಮಿಷ | | | | | **ಅಭ್ಯಾಸ ಚಟುವಟಿಕೆ :–**<br>* ದೇಹಕ್ಕೆ ಶಕ್ತಿ, ಬೆಳವಣಿಗೆ, ಆರೋಗ್ಯ ಕೊಡುವ ವಿವಿಧ ಪೋಷಕಾಂಶಗಳುಳ್ಳ ಆಹಾರ ವಸ್ತುಗಳನ್ನು ಪಟ್ಟಿ ಮಾಡುವರು. | | | | | |

# 29ನೇ ದಿನ



| ಅವಧಿ | ಸಮಯ ಹಂಚಿಕೆ | ನಾಲ್ಕನೇ ತರಗತಿ | | | | | ಐದನೇ ತರಗತಿ | | | | |
|---|---|---|---|---|---|---|---|---|---|---|---|
| | | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| ಮೂರನೇ ಅವಧಿ | 10 ನಿಮಿಷ | ಸಾ. ಉ. ಉ. ಕಾ.<br>**ಬೆಂಕಿಪೊಟ್ಟಣದಿಂದ ಮಿಂಚು ಪಟ್ಟಿ ತಯಾರಿಕೆ** | * ಅನುಪಯುಕ್ತ ವಸ್ತುಗಳ ಸದ್ಬಳಕೆ ಕೌಶಲ ಬೆಳೆಸುವುದು | ಖಾಲಿ ಬೆಂಕಿ ಪೊಟ್ಟಣ ಚಿತ್ರಪಟಗಳು, ಕತ್ತರಿ, ಅಂಟು, ಇತ್ಯಾದಿ | ಶಿಕ್ಷಕರು | **ಪೂ.ಸಿ.ಚ. :–**<br>ತರಗತಿಯ ಮಕ್ಕಳನ್ನು ವೃತ್ತಾಕಾರವಾಗಿ ನಿಲ್ಲಿಸಿ ಕೆರೆ–ದಡ ಆಟ ಆಡಿಸುವರು. ಎರಡು ತರಗತಿ ಮಕ್ಕಳು ಚಟುವಟಿಕೆಯಲ್ಲಿ ಪಾಲ್ಗೊಳ್ಳುವರು. 5ನೇ ತರಗತಿಗೆ ಸ್ವಕಲಿಕೆ ಸೂಚನೆ ನೀಡುವರು. | **Do you agree ?** | Learn to play guessing game | Some common objects found in the classroom | L E A D E R | Teacher recite the rhyme "piggi on the railway" with action and make the children to repeat it. Then teacher give instruction to play the guessing game.<br><br>**Learning Activity :-**<br>Leader hides a thing call the children at random and ask.<br>Is it a stone ?<br>child answer<br>No. it is not .......... ...........<br>Yes. it is a stone ? |
| | 30 ನಿಮಿಷ | | | | | * ಖಾಲಿ ಬೆಂಕಿ ಪೊಟ್ಟಣಗಳಿಂದ ಅಕ್ಷರಗಳ, ಪ್ರಾಣಿಗಳ, ಸಸ್ಯಗಳ ಚಿತ್ರ ಅಂಟಿಸಿ ಮಿಂಚುಪಟ್ಟಿ ತಯಾರಿಸುವರು.<br>ಶಿಕ್ಷಕರು ಮಾರ್ಗದರ್ಶನ ನೀಡಿ ಮಿಂಚುಪಟ್ಟಿ ಸಿದ್ಧಪಡಿಸುವಂತೆ ಸೂಚಿಸುವರು. ಮಕ್ಕಳು ಗುಂಪಿನಲ್ಲಿ ತಯಾರಿಸಿ ಪ್ರದರ್ಶಿಸುವರು. | | | | | |
| | 10 ನಿಮಿಷ | **ಕೇಳಿ ಕಲಿ** | | ರೇಡಿಯೋ | ಹಿರೇಮಣಿ | **ಪೂ.ಸಿ.ಚ. :**<br>5ನೇ ತರಗತಿ ಮಕ್ಕಳೊಂದಿಗೆ ಚಟುವಟಿಕೆಯಲ್ಲಿ ಭಾಗವಹಿಸುತ್ತಾರೆ. ಶಿಕ್ಷಕರು ರೇಡಿಯೋ ಕಾರ್ಯಕ್ರಮಕ್ಕೆ ಸಜ್ಜುಗೊಳಿಸುವರು. | **ಸಮಾಜ**<br>**ಸಿಂಧೂ ನಾಗರೀಕತೆ (ಮುಂ. ಪಾಠ)** | * ಭಾರತದ ಪ್ರಾಚೀನ ಕಾಲದಲ್ಲಿಯೇ ಉಚ್ಚಮಟ್ಟದ ನಾಗರಿಕತೆ ಇತ್ತು ಎಂಬುದನ್ನು ತಿಳಿದು ಅಭಿಮಾನ ಪಡುವುದು. | ಪ್ರಶ್ನಾವಳಿ ಚಾರ್ಟ್, ಕ್ರೀಡೆಗಳ ಚಾರ್ಟ್ | ಶಿಕ್ಷಕರು | **ಪೂ.ಸಿ.ಚ. :** ಹಾಡು<br>'ಭೂಮಿಯ ಮೇಲೆ ಕಾಣಿಸಿಕೊಂಡ ನಾಗರೀಕತೆಗಳು ಹಲವಾರು'<br>(ಚುಕ್ಕಿ ಚಿನ್ನ ಪುಸ್ತಕದ ಪುಟ ಸಂ. 59ನ್ನು ನೋಡಿ). |
| | 30 ನಿಮಿಷ | | | | | **ರೇಡಿಯೋ ಕಾರ್ಯಕ್ರಮ ಆಲಿಸುವರು** | | | | | **ಅಭ್ಯಾಸ ಚ. :** ಪ. ಪುಸ್ತಕದಲ್ಲಿನ ಲಘು ಟಿಪ್ಪಣಿ ಬರೆಸುವರು.<br>ಉದಾ:<br>* ಸಿಂಧೂ ಜನರ ಕ್ರೀಡೆ ಮತ್ತು ವಿನೋದ<br>* ಬರವಣಿಗೆ<br>* ಹೊಂದಿಸಿ ಬರೆಯಲು ಸೂಚಿಸುವರು<br><br>**ಮೌಲ್ಯಮಾಪನ ಚ :–**<br>1) ಗ್ರಾಮೀಣ ಕ್ರೀಡೆಗಳ ಹೆಸರುಗಳನ್ನು ಪಟ್ಟಿ ಮಾಡಿರಿ.<br>2) ಸಿಂಧೂ ಜನರ ಕ್ರೀಡೆಗಳನ್ನು ಪಟ್ಟಿ ಮಾಡಿರಿ<br>ಘಟಕ ಪರೀಕ್ಷೆ ಪರಿಹಾರ ಬೋಧನೆಗೆ ಅವಧಿ ಹೊಂದಾಣಿಕೆ ಮಾಡಿಕೊಳ್ಳುವರು. |

# 29ನೇ ದಿನ

| ಅವಧಿ | ಸಮಯ ಹಂಚಿಕೆ | ನಾಲ್ಕನೇ ತರಗತಿ | | | | | ಐದನೇ ತರಗತಿ | | | | |
|---|---|---|---|---|---|---|---|---|---|---|---|
| | | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| ನಾಲ್ಕನೇ ಅವಧಿ | 10 ನಿಮಿಷ | ಸಾ. ಉ. ಉ. ಕಾ.<br>ವಸ್ತು ಒಂದು ಕಲಿಕೆ ಹಲವು | * ವಾರ್ತಾಪತ್ರಿಕೆಗಳು, ವಿಶೇಷಾಂಕಣಗಳ ಸಂಗ್ರಹಣಾ ಹವ್ಯಾಸ ಬೆಳೆಸುವುದು | ಹಳೆನ್ಯೂಸ್ ಪೇಪರ್, ಕತ್ತರಿ, ಅಂಟು, ಸ್ಕೆಚ್ ಪೆನ್ | ಶಿಕ್ಷಕರು | **ಪೂ.ಸಿ.ಚ. :–**<br>ನಾಲ್ಕು ಮತ್ತು ಐದನೇ ತರಗತಿ ಮಕ್ಕಳಿಗೆ ಒಟ್ಟಿಗೆ ಒಂದು ಕಥೆಯನ್ನು ಹೇಳಿ ಐದನೇ ತರಗತಿಯವರಿಗೆ ಹಿರೇಮಣಿ ಸಹಾಯದಿಂದ ಸ್ವಕಲಿಕೆಗೆ ಸೂಚನೆ ನೀಡುವರು. | ವಿಜ್ಞಾನ<br>ಸಜೀವಿಗಳ ಗುಣಲಕ್ಷಣಗಳು | * ಸಜೀವಿಗಳು ನಿರ್ಜೀವಿಗಳಿಗಿರುವ ಗುಣಲಕ್ಷಣಗಳಿಗಿಂತ ವಿಶಿಷ್ಟವಾದ ಗುಣಲಕ್ಷಣಗಳನ್ನು ಹೊಂದಿವೆ ಎಂದು ತಿಳಿಯುವರು | ಪ್ರಚೋದನೆಗೆ ತಕ್ಕ ಪ್ರತಿಕ್ರಿಯೆ – ಸಾಮಗ್ರಿಗಳು<br>ಚಿತ್ರಪಟಗಳು, ಮುಟ್ಟಿದರೆ ಮುನಿಗಿಡ – ಚಿತ್ರ | ಹಿರೇಮಣಿ | **ಪೂ.ಸಿ.ಚ. :–**<br>ಕಥೆ ಆಲಿಸುವರು. |
| | 30 ನಿಮಿಷ | | | | | ಹಳೆನ್ಯೂಸ್ ಪೇಪರ್‌ನಿಂದ ಪಠ್ಯಕ್ಕೆ ಸಂಬಂಧಿಸಿದಂತೆ ವಿಷಯವಾರು ಗಣಿತ, ಪ.ಅ. ಭಾಷೆಗೆ ಸಂಬಂಧಿಸಿದಂತೆ ವಾಹಿತಿಗಳನ್ನು ಕತ್ತರಿಸಿ ವರ್ಗೀಕರಿಸಿ ಆಲ್ಬಮ್ ತಯಾರಿಸುವರು.<br>* ಕ್ರೀಡಾಪಟುಗಳು<br>* ಶಿಶು ಗೀತೆಗಳು<br>* ಕಥೆಗಳು<br>* ಚಿತ್ರಗಳು ಇತ್ಯಾದಿ.<br>ವಿದ್ಯಾರ್ಥಿಗಳು ಗುಂಪಿನಲ್ಲಿ ಒಂದೊಂದು ಆಲ್ಬಮ್ ತಯಾರಿಸಲು ಮಾರ್ಗದರ್ಶನ ನೀಡುವರು. | | | | | ಹಿರೇಮಣಿ ಸಹಾಯದಿಂದ ವಿದ್ಯಾರ್ಥಿಗಳು ಗುಂಪಿನಲ್ಲಿ ಪ್ರಶ್ನಾವಳಿ ಕಾರ್ಡುಗಳಿಗೆ ಉತ್ತರಿಸುವರು.<br>1. ವಿಸರ್ಜನಕ್ರಿಯೆ ಎಂದರೇನು ?<br>2. ನಾಯಿಯ ಎದುರು ಏನಾದರೂ ಆಹಾರ ಪದಾರ್ಥ ಇಟ್ಟಲ್ಲಿ ಅದು ಜೊಲ್ಲು ಸುರಿಸುತ್ತದೆ ಕಾರಣವೇನು ?<br>ಚಿತ್ರಪಟಗಳ ಸಹಾಯದಿಂದ ಸಜೀವಿಗಳ ಲಕ್ಷಣಗಳನ್ನು ಪಟ್ಟಿ ಮಡುವರು. |
